ಶ್ರೀಮತಿ ಲೀಲಾವತಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಮಹಿಳೆಯರ ಬಗ್ಗೆ ಇಷ್ಟೊಂದು ಕಳಕಳಿಯನ್ನು ಇಟ್ಟುಕೊಂಡಿರತಕ್ಕಂಥ ಶಾಸಕರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಅಧ್ಯಕ್ಷರು : ಮಹಿಳೆಯರಿಗೂ ಮತ್ತು ನಿಮಗೂ ಎಲ್ಲರಿಗೂ ಅಭಿನಂದನೆಗಳು.

ಶ್ರೀ ಸೈಯದ್ ಜುಲ್ಫಕರ್ ಹಶ್ಮಿ : ಮಾನ್ಯ ಅಧ್ಯಕ್ಷರೆ, ನಮ್ಮ ಬೀದರ್ ಜಿಲ್ಲೆ ಕೇಂದ್ರ ಸರ್ಕಾರದ ಸ್ಪೆಷಲ್ ಏರಿಯಾ ಇಂಟೆನ್ಸೀವ್ ಪ್ರೊಗ್ರಾಮ್‌ನಲ್ಲಿ ಬಂದಿದೆ. ಆದ್ದರಿಂದ ಕೇಂದ್ರ ಸರ್ಕಾರದ ಇಶ್ಯೂ ಏನು ಇದೆ, ಇದಕ್ಕೆ ರಾಜ್ಯ ಸರ್ಕಾರದವರು ಕೂಡಲೆ ಅಪ್ಲೈಮಾಡಬೇಕು. ಅದನ್ನು ಬೇಗನೆ ಇಂಪ್ಲಿಮೆಂಟ್ ಮಾಡಬೇಕು. ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ನಮ್ಮ ಜಿಲ್ಲೆಯಲ್ಲಿ ಪ್ರಾರಂಭ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಬಹಳ ತೊಂದರೆಯಿದೆ.

ಅಧ್ಯಕ್ಷರು : ಅದನ್ನು ಕನ್ನಿಡರ್ ಮಾಡಿ.

ಶ್ರೀ ಬಿ. ಚಂದ್ರಣ್ಣ : ಮಾನ್ಯ ಅಧ್ಯಕ್ಷರೆ, ಐ.ಟಿ.ಐ.ನಲ್ಲಿ ಈಗ ನೋಂದಣಿ ಇದೆ, ಅದಕ್ಕೆ ಜಾಸ್ತಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಏಕೆಂದರೆ ಹುಡುಗರಿಂದ ಬಹಳಷ್ಟು ಒತ್ತಡ ಇದೆ.

ಅಧ್ಯಕ್ಷರು : ಅದು ಬೇರೆ ಪ್ರಶ್ನೆ, ಇದು ಬೇರೆ ಆಯಿತು. ಇದು ಬೀದರ್‌ನಲ್ಲಿ ಜಾಗ ಎಷ್ಟು ಇದೆಯೆಂದು ಕೇಳಿದ್ದಾರೆ?

ಶ್ರೀ ಬಿ. ಚಂದ್ರಣ್ಣ : ಮಾನ್ಯ ಅಧ್ಯಕ್ಷರೆ, ಐ.ಟಿ.ಐ.ಗೆ ಇದೂ ಸಂಬಂಧಪಟ್ಟಿರುವುದರಿಂದ ಈ ಸಂದರ್ಭದಲ್ಲಿ ಪ್ರಶ್ನೆ ಕೇಳುತ್ತಿದ್ದೇನೆ. ಹುಡುಗರ ಒತ್ತಡ ಐ.ಟಿ.ಐ.ಗೆ ಜಾಸ್ತಿ ಇರುವುದರಿಂದ ಇದನ್ನು ಸರ್ಕಾರ ಗಮನಿಸಬೇಕು.

ಶ್ರೀ ಬಿ, ಸತ್ಯನಾರಾಯಣ : ಐ.ಟಿ.ಐ. ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಎಲ್ಲಾ ಸದಸ್ಯರು ಡಿಮ್ಯಾಂಡ್‌ನ್ನು ಮಾಡುತ್ತಿದ್ದಾರೆ. ಇದರ ಅವಶ್ಯಕತೆ ಇರುವುದು ಕೂಡ ಸಹಜವೇ ಆಗಿದೆ. ಆದ್ದರಿಂದ ಹೆಚ್ಚು ಕಾಲೇಜುಗಳನ್ನು ಪ್ರಾರಂಭ ಮಾಡುವ ದಿಸೆಯಲ್ಲಿ ಸರ್ಕಾರ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತದೆ.

ತಲಕಾಡು ಮತ್ತು ಹೆಮ್ಮಿಗೆ ಸೇತುವೆ ನಿರ್ಮಾಣ

2570 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನದಿಗೆ ಟಿ. ನರಸೀಪುರ ತಾಲ್ಲೂಕಿನ ತಲಕಾಡು ಮತ್ತು ಹೆಮ್ಮಿಗೆ ಗ್ರಾಮಗಳನ್ನು ಸೇರಿಸುವ ಹೆಮ್ಮಿಗೆ ಸೇತುವೆ ಯಾವಾಗ ಪ್ರಾರಂಭವಾಯಿತು, ಇದರ ಯೋಜನೆ ಎಷ್ಟು?

ಆ) ಇಲ್ಲಿಯವರೆಗೆ ಏನು ಕೆಲಸವಾಗಿದೆ, ಖರ್ಚಾಗಿರುವ ಹಣವೆಷ್ಟು, ಇನ್ನೂ ಎಷ್ಟು ಹಣದ ಅವಶ್ಯಕತೆ ಇದೆ ಈ ಸೇತುವೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 1984 ರಲ್ಲಿ ಆರಂಭವಾಯಿತು. ಈ ಯೋಜನೆಯ ಪರಿಷ್ಕೃತ ಅಂದಾಜು ಪಟ್ಟಿ 232.00 ಲಕ್ಷ ರೂ.ಗಳು.

ಆ) ಒಟ್ಟು 43 ಅಂಕಣಗಳ ಪೈಕಿ 15 ಅಂಕಣಗಳು ಪೂರೈಸಿದೆ ಹಾಗೂ ಹೆಮ್ಮಿಗೆ ಬದಿಯ ಕೂಡು ರಸ್ತೆ ಮುಗಿದಿದೆ. ಉಳಿಕೆ ಕಾಮಗಾರಿಗೆ ಬಂದಿರುವ ಗುತ್ತಿಗೆ ದರದಂತೆ 342 ಲಕ್ಷ ರೂ.ಗಳ ಅವಶ್ಯಕತೆ ಇದೆ. ಗುತ್ತಿಗೆ ಒಪ್ಪಿದ 3 ವರ್ಷಗಳಲ್ಲಿ ಪೂರೈಸಲು ಕಾರ್ಯಕ್ರಮ ಇದೆ.

10.30 ಎ.ಎಂ

ಶ್ರೀ ಎಸ್. ಕೃಷ್ಣಪ್ಪ : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಈ ಹೆಮ್ಮಿಗೆ ಸೇತುವೆ ನಿರ್ಮಾಣಕ್ಕೆ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಅವರು ಇಲ್ಲಿಯವರೆಗೆ ಎಷ್ಟು ಖರ್ಚಾಗಿದೆ ಎಂದು ಹೇಳಿಲ್ಲ, ಅಂದಾಜು ಪಟ್ಟಿ ಮಾತ್ರ ಹೇಳಿದ್ದಾರೆ. ಯಾವಾಗ ಇದನ್ನು ಪೂರೈಸುತ್ತೀರಿ ಎಂದರೆ, ಗುತ್ತಿಗೆ ಒಪ್ಪಿದ ಮೂರು ವರ್ಷಗಳಲ್ಲಿ ಪೂರೈಸುತ್ತೇವೆ ಎಂದು ಹೇಳುತ್ತಾರೆ. ಹಾಗಾದರೆ ಈ ಸೇತುವೆ ಕೆಲಸ 1984ರಲ್ಲಿ ಪ್ರಾರಂಭವಾದದ್ದು ಇಲ್ಲಿಯವರೆಗೆ ಸುಮಾರು 12 ವರ್ಷಗಳಾಗಿವೆ. ಈ 12 ವರ್ಷಗಳಲ್ಲಿ ಆಗಿರತಕ್ಕ ಕೆಲಸ ಏನೆಂದರೆ, 43 ಅಂಕಣಗಳ ಪೈಕಿ 15 ಅಂಕಣಗಳಾಗಿವೆ ಎಂದು ಹೇಳುತ್ತಾರೆ. 12 ವರ್ಷಗಳಿಗೆ 15 ಅಂಕಣಗಳಾದಮೇಲೆ, ಇನ್ನುಳಿದ ಅಂಕಣಗಳಿಗೆ ಎಷ್ಟು ವರ್ಷ ಬೇಕಾಗುತ್ತದೆ ಎಂದರೆ ಅದು ಸುಮಾರು ಇನ್ನೂ 30 ವರ್ಷಬೇಕಾಗುತ್ತದೆ. ಹಿಂದೆ ಇದ್ದಂಥ ಮುಖ್ಯ ಮಂತ್ರಿಗಳು ಅವರ ಗ್ರಾಮ ಸಂದರ್ಶದಲ್ಲಿ ಎರಡು ವರ್ಷಗಳಲ್ಲಿ ಮುಗಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಕ್ಯಾಬಿನೆಟ್‌ನಲ್ಲೂ ತೀರ್ಮಾನ ಮಾಡಿದ್ದರು. ಪರಿಷ್ಕೃತ ಅಂದಾಜಿನ ಪ್ರಕಾರ ಟೆಂಡರನ್ನೂ ಕರೆದಿದ್ದರು,

ಅದು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗಿತ್ತು. ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಇನ್ನೂ ಬರಲಿಲ್ಲ ಮತ್ತು ಗುತ್ತಿಗೆದಾರರಿಗೆ ಒಪ್ಪಿಗೆ ಕೊಡಲಿಲ್ಲ. ಗುತ್ತಿಗೆ ಒಪ್ಪಿಗೆಯಾದ ಮೇಲೆ ಮೂರು ವರ್ಷದಲ್ಲಿ ಪೂರೈಸುತ್ತೇವೆ ಎಂದು ಹೇಳಿದ್ದಾರೆ. ಅಂದರೆ ಅದನ್ನು ಈಗ ಒಪ್ಪುತ್ತಾರೆಯೇ ಅಥವಾ ಇನ್ನೂ ಒಂದು ವರ್ಷವಾದ ಮೇಲೆ ಒಪ್ಪುತ್ತಾರೋ? ಇನ್ನು ಐದು ವರ್ಷಗಳಾದ ಮೇಲೆ ಒಪ್ಪುತ್ತಾರೋ? ಇದು ಪ್ರಾರಂಭವಾಗಿ ಮೊದಲೇ 12 ವರ್ಷವಾಗಿದೆ. ಒಟ್ಟು ಇಲ್ಲಿಯವರೆಗೆ ಮೊದಲ ಅಂದಾಜು ಎಷ್ಟು ಎಂದರೆ ಅದಕ್ಕೆ ಉತ್ತರ ವಿಲ್ಲ, ಎಷ್ಟು ಖರ್ಚಾಗಿದೆ ಎನ್ನುವುದಕ್ಕೂ ಉತ್ತರವಿಲ್ಲ. 43 ಅಂಕಣಗಳಲ್ಲಿ 15 ಅಂಕಣಗಳನ್ನು ಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಪೂರ್ಣ ಕಾಳಜಿಯನ್ನು ವಹಿಸಿ, ಖಡಾಖಂಡಿತವಾಗಿ ಯಾವಾಗ ಮುಗಿಸುತ್ತೀರೋ? ಗುತ್ತಿಗೆದಾರರಿಗೆ ಯಾವಾಗ ನೀವು ಒಪ್ಪಿಸುತ್ತೀರಿ ಎನ್ನುವ ಬಗ್ಗೆ ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿಧುವಂಥ ಈ ಸೇತುವೆಯಲ್ಲಿ ಈವರೆಗೆ 15ಅಂಕಣಗಳನ್ನು ಮುಗಿಸಿದ್ದಾರೆ ಎನ್ನುವುದನ್ನು ನಾವು ಅವರ ಗಮನಕ್ಕೆ ತಂದಿದ್ದೇವೆ. ಅದಕ್ಕೆ ಸುಮಾರು 38 ಲಕ್ಷ ರೂಪಾಯಿಗಳಷ್ಟು ಹಣ ಖರ್ಚಾಗಿದೆ. ಅವರು ಯೋಜನೆಯ ವೆಚ್ಚ ಎಷ್ಟು ಎಂದು ಪ್ರಶ್ನೆ ಕೇಳಿದಾಗ ಅದರ ಬಗ್ಗೆ ನಾವು 231 ಲಕ್ಷ ರೂಪಾಯಿಗಳು ಎನ್ನುವುದನ್ನು ಕೊಟ್ಟಿದ್ದೇವೆ. ಆದರೆ ಇವತ್ತು ಏನಾಗಿದೆ ಎಂದರೆ 1991ರಲ್ಲಿ ಅದರ ಗುತ್ತಿಗೆಯನ್ನು ರದ್ದುಪಡಿಸಿ ಬೇರೆಯವರಿಗೆ ಗುತ್ತಿಗೆಯನ್ನು ಕೊಡಬೇಕು ಎನ್ನುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದು

ವಿಳಂಬವಾಗಿದೆ. 1995ರವರೆಗೆ ಅದರ ಬಗ್ಗೆ ಯಾವುದೇ ಕಾರ್ಯಕ್ರಮವನ್ನೂ ಜಾರಿ ಮಾಡಿರಲಿಲ್ಲ. ಈಗಾಗಲೇ ಅದನ್ನು 3 ಕೋಟಿ 42 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ಗುತ್ತಿಗೆಯನ್ನು ಕೆ.ವಿ.ಎಸ್. ಶೇಷಗಿರಿರಾವ್ ಎನ್ನುವವರಿಗೆ ಒಪ್ಪಿಸಿದ್ದು, ಇದನ್ನು ಮಂಜೂರಾತಿಗೆ ಆರ್ಥಿಕ ಇಲಾಖೆಗೆ ಕಳುಹಿಸಿ ಕೊಡಲಾಗಿದೆ. ಇದು ಮಂಜೂರಾದರೆ 2 ವರ್ಷ ಆಗುತ್ತದೆ ಎನ್ನುವುದನ್ನು ನಾವು ಹೇಳಿದ್ದೇವೆಯೇ ಹೊರತು ಇದು ಮಂಜೂರಾತಿ ಆಗುವುದಕ್ಕೇ ಎಷ್ಟು ವರ್ಷ ಆಗುತ್ತದೆ ಎಂದು ಕೇಳುತ್ತೇನೆ ಎನ್ನುವ ಮಾತು ಸರಿಯಲ್ಲ. ಅದು ತೀವ್ರವಾಗಿ ಮಂಜೂರಾಗುತ್ತದೆ. ಬೇಗ ಆ ಕೆಲಸವನ್ನು ಮುಗಿಸಲು ಪ್ರಯತ್ನ ಮಾಡುತ್ತೇವೆ ಎಂದು ಹೇಳಲು ಇಚ್ಛಿಪಡುತ್ತೇನೆ.

ಶ್ರೀ ಎಸ್. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಅವರು ವೇಗ್ ಆಗಿ ಒಪ್ಪಿಗೆಯಾದ ಮೇಲೆ ಎಂದು ಉತ್ತರ ಕೊಟ್ಟಿದ್ದಾರೆ. ತಾವು ಖಂಡಿತವಾಗಿ ಯಾವಾಗ ಒಪ್ಪಿಗೆ ಕೊಡುತ್ತೀರಿ, ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಯಾವಾಗ ತರಿಸುತ್ತೀರಿ, ಕೆಲಸ ಪ್ರಾರಂಭ ಮಾಡುವುದಕ್ಕೆ ಗುತ್ತಿಗೆದಾರರಿಗೆ ಯಾವಾಗ ನಿಖರವಾದಂಥ ಆಜ್ಞೆಯನ್ನು ಕೊಡುತ್ತೀರಿ, ಎನ್ನುವುದನ್ನು ಹೇಳಿದರೆ ಸಾಕು.

ಶ್ರೀ ಸಿ.ಎಂ. ಉದಾಸಿ : ಆರ್ಥಿಕ ಇಲಾಖೆಯಿಂದ ತೀವ್ರವಾಗಿ ಮಂಜೂರಾತಿಯನ್ನು ಪಡೆದು ಅತೀ ಬೇಗ ಮುಗಿಸುವ ವ್ಯವಸ್ಥೆ ಮಾಡಿಸುತ್ತೇವೆ.

ಶ್ರೀ ಎಸ್. ಕೃಷ್ಣಪ್ಪ : ನನ್ನ ಪ್ರಶ್ನೆ ಇಷ್ಟೇ. ತೀವ್ರ, ತೀವ್ರ ಎಂದು ಹೇಳುತ್ತಿದ್ದಾರೆ, ಆರ್ಥಿಕ ಇಲಾಖೆಗೆ ಹೋಗಿ ಈಗಾಗಲೇ ನಾಲ್ಕು ತಿಂಗಳಾಗಿದೆ. ಇಲ್ಲಿಂದ ಇಲ್ಲಿಗೆ ಬರಬೇಕಾದರೇ ನಾಲ್ಕು ತಿಂಗಳು ಆದರೆ, ಕೊಡುವುದು ಯಾವಾಗ? This is on going project..

ಅಧ್ಯಕ್ಷರು : ಮೂರು ತಿಂಗಳು ಆಗಬಹುದೇ?

ಶ್ರೀ ಸಿ.ಎಂ. ಉದಾಸಿ : ಮೂರು ತಿಂಗಳೊಳಗಾಗಿ ಮಾಡಿಸುತ್ತೇವೆ.

ಅಧ್ಯಕ್ಷರು : ಮೂರು ತಿಂಗಳೊಳಗಾಗಿ ಮಾಡಿಸುತ್ತಾರೆ.

ಪ.ಜಾ/ಪ.ಪಂ.ಗಳಿಗೆ ವಾದ್ಯಪರಿಕರಗಳ ಹಂಚಿಕೆ

1614 - ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ದೇವದುರ್ಗ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳಿಗೆ ವಾದ್ಯಪರಿಕರಗಳನ್ನು ಕೊಡುವ ಕಾರ್ಯಕ್ರಮವಿದೆಯೇ?*

ಆ) *ಇದರಡಿಯಲ್ಲಿ 1995-96ನೇ ಸಾಲಿನಲ್ಲಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ವಾದ್ಯಪರಿಕರಗಳನ್ನು ಕೊಡಲಾಗಿದೆ.*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಇದೆ

ಆ) ವಿವರಗಳನ್ನು ಅನುಬಂಧದಲ್ಲಿ ಕೊಡಿಲಾಗಿದೆ.